**<u>ದಿನಾಂಕಃ 08-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಎನ್ ಎಸ್ ಬಿ ವಕೀಲರಿಂದಃ</u>**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಬನ್ನಿಹಟ್ಟಿ ಗ್ರಾಮದ ಸರ್ವೆ ನಂಬರ 35/1+2 ಜಮೀನು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇಲ್ಲ ಅದು ಶಶಿಕಲಾ ಬಸನಗೌಡ ಪಾಟೀಲ, ಭೋಜನಗೌಡ ಬಸನಗೌಡ ಪಾಟೀಲ ಮತ್ತು ಪ್ರಭಾವತಿ ಕೋಂ. ಶಿವಕುಮಾರ ಶೆಟ್ಟರ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭೋಜನಗೌಡ ಬಸನಗೌಡ ಪಾಟೀಲರವರನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ.

2. ಬನ್ನಿಹಟ್ಟಿ ಗ್ರಾಮದ ಸರ್ವೆ ನಂಬರ 36/1 ಬ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಶಶಿಕಲಾ ಬಸನಗೌಡ ಪಾಟೀಲ, ಭೋಜನಗೌಡ ಬಸನಗೌಡ ಪಾಟೀಲ ಮತ್ತು ಪ್ರಭಾವತಿ ಕೋಂ. ಶಿವಕುಮಾರ ಶೆಟ್ಟರ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂಬರ 20/5 ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಬನ್ನಿಹಟ್ಟಿ ಗ್ರಾಮದ ಸರ್ವೆ ನಂಬರ 17/2 ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಆಸ್ತಿ ವಿವರಣೆಯಲ್ಲಿ ಅದರ ಆಕಾರ ರೂ.2.30 ಪೈಸೆ ಎಂದು ತಪ್ಪು ಬರೆದಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಬನ್ನಿಹಟ್ಟಿ ಗ್ರಾಮದ ಸರ್ವೆ ನಂಬರ 20/10 ಜಮೀನು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಆಕಾರ ದಾವಾ ಶೆಡ್ಯೂಲ್‌ನಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ 6 ನೇ ಜಮೀನು ಸರ್ವೆ ನಂಬರ 17/2 ಬಿಟ್ಟು ಉಳಿದ ಜಮೀನುಗಳ ಆರ್‌ಟಿಸಿಗಳಲ್ಲಿ ಶಶಿಕಲಾ

ಬಸನಗೌಡ ಪಾಟೀಲ, ಭೋಜನಗೌಡ ಬಸನಗೌಡ ಪಾಟೀಲ ಮತ್ತು ಪ್ರಭಾವತಿ ಕೋಂ. ಶಿವಕುಮಾರ ಶೆಟ್ಟರ ರವರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 17/2, 20/4+5, 35/1+2 ಮತ್ತು 36/1 ಬಿ ಸದರಿ ಜಮೀನುಗಳು ಬಸನಗೌಡ ರಾಮನಗೌಡ ಪಾಟೀಲ ರವರ ಹೆಸರಿನಲ್ಲಿ 1996 ರವರೆಗೆ ಇದ್ದವು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ಅಂದರೆ ಬಸನಗೌಡ ರಾಮನಗೌಡ ಪಾಟೀಲ ದಿಃ 10-08-1996 ರಲ್ಲಿ ತೀರಿಕೊಂಡರು ಎಂದರೆ ನನಗೆ ನಿಖರವಾದ ದಿನಾಂಕ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 25 ವರ್ಷಗಳು ಕಳೆದಿವೆ ಎನ್ನುತ್ತಾರೆ. ಸದರಿ ಮೇಲೆ ಹೇಳಿದ 04 ಜಮೀನುಗಳಿಗೆ ಸದರಿ  ಬಸನಗೌಡ ರಾಮನಗೌಡ ಪಾಟೀಲರವರು ತೀರಿಕೊಂಡ ನಂತರ ಸದರಿ ಶಶಿಕಲಾ ಬಸನಗೌಡ ಪಾಟೀಲ, ಭೋಜನಗೌಡ ಬಸನಗೌಡ ಪಾಟೀಲ, ನಾಗನಗೌಡ ಮತ್ತು ಪ್ರಭಾವತಿ ಕೋಂ. ಶಿವಕುಮಾರ ಶೆಟ್ಟರ ರವರ ಹೆಸರು ವಾರಸ ಪ್ರಕಾರ ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಅದಕ್ಕೆ ಸಂಬಂಧಿಸಿದಂತೆ ಬನ್ನಿಹಟ್ಟಿ ಗ್ರಾಮದ ಡ ನಂಬರ 3420 ಮಂಜೂರು ಆಗಿ ಅಂಗೀಕಾರವಾಗಿದೆ ಅಂದರೆ ನನಗೆ ಗೊತ್ತಿಲ್ಲ. ಆ ನಂತರ ಸದರಿ ನಾಗನನೌಡ ಬಸನಗೌಡ ಪಾಟೀಲ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಾಗನಗೌಡರವರು ಭೋಜನಗೌಡರವರಿಗಿಂತ ಚಿಕ್ಕವರು ಎಂದರೆ ಸರಿ. ಆದರೂ ಸಹ ವಂಶಾವಳಿಯಲ್ಲಿ ಸದರಿ ನಾಗನಗೌಡ ದೊಡ್ಡವರು ಎಂದು ತಪ್ಪು ತೋರಿಸಿರುತ್ತೇವೆ ಎಂದರೆ ಸರಿಅಲ್ಲ.

3. ದಾವಾ ದಾಖಲಿಸುವ ಕಾಲಕ್ಕೆ ದಾವಾ ಜಮೀನುಗಳ ಉತಾರಗಳಲ್ಲಿ ಸದರಿ ಶಶಿಕಲಾ ಬಸನಗೌಡ ಪಾಟೀಲ, ಭೋಜನಗೌಡ ಬಸನಗೌಡ ಪಾಟೀಲ ಮತ್ತು ಪ್ರಭಾವತಿ ಕೋಂ. ಶಿವಕುಮಾರ ಶೆಟ್ಟರ ರವರ ಹೆಸರು ದಾಖಲಾಗಿದ್ದನ್ನು ನೋಡಿರುತ್ತೇನೆ. ಸದರಿಯವರ ಹೆಸರುಗಳು ಬನ್ನಿಹಟ್ಟಿ ಗ್ರಾಮದ ಡ ನಂಬರ 3420 ನೇದ್ದರ ಆಧಾರ ಮೇಲೆ ದಾಖಲಾಗಿದ್ದು ಅದನ್ನು ಇವತ್ತಿನವರೆಗೂ ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಸಿ ನ್ಯಾಯಾಲಯದಲ್ಲಿಮೇಲ್ಮನವಿ ಸಲ್ಲಿಸಿಲ್ಲ. ಸದರಿ ಶಶಿಕಲಾ ಬಸನಗೌಡ ಪಾಟೀಲ, ಭೋಜನಗೌಡ ಬಸನಗೌಡ ಪಾಟೀಲ ಮತ್ತು ಪ್ರಭಾವತಿ ಕೋಂ. ಶಿವಕುಮಾರ ಶೆಟ್ಟರ

ರವರ ಹೆಸರು ದಾಖಲಾಗಿದ್ದು ಸರಿ ಇರುವುದರಿಂದ ನಾನು ಸದರಿ ಡ ನಂಬರ 3420 ನೇದ್ದನ್ನು ಪ್ರಶ್ನಿಸಿಲ್ಲ ಎಂದರೆ ಸರಿಅಲ್ಲ.

4. ಬನ್ನಿಹಟ್ಟಿಗ್ರಾಮದ ಸರ್ವೆ ನಂಬರ 27/2+3 ಸಹ ಬಸನಗೌಡ ರಾಮನಗೌಡ ಪಾಟೀಲರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಬಸನಗೌಡ ರಾಮನಗೌಡ ಪಾಟೀಲರವರು ತೀರಿಕೊಂಡ ನಂತರ ಬನ್ನಿಹಟ್ಟಿ ಗ್ರಾಮದ ಎಮ್.ಆರ್.ಸಂಖ್ಯೆ: ಹೆಚ್ 51/2020-21 ನೇದ್ದರ ಆಧಾರ ಮೇಲೆ ವಾರಸ ಪ್ರಕಾರ 1 ರಿಂದ 3 ನೇ ಪ್ರತಿವಾದಿಯರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಈ ದಾವೆ ದಾಖಲಿಸುವ ಮುಂಚೆ ನನಗೆ ಗೊತ್ತಿತ್ತು ಎಂದರೆ ಸರಿ. ಸದರಿ ಎಮ್.ಆರ್.ಸಂಖ್ಯೆ: ಹೆಚ್51/2020-21 ನೇದ್ದನ್ನು ನಾವು ಎಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ.

5. ಸರ್ವೆ ನಂಬರ 17/2 ಕ್ಕೆ ಸಂಬಂಧಿಸಿದಂತೆ ಕಾಂತೇಶ ಕೋಳೂರು ಅಂದರೆ 08 ನೇ ಪ್ರತಿವಾದಿಯ ಹೆಸರಿಗೆ ದಿಃ 18-03-2015 ರಂದು ಖರೀದಿ ಪತ್ರ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರವನ್ನು 1 ರಿಂದ 3 ನೇ ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಸಿದ ಜಮೀನಿಗೆ ಎಮ್.ಆರ್.ಸಂಖ್ಯೆ: ಹೆಚ್35/2014-15 ನೇದ್ದರ ಪ್ರಕಾರ 8 ನೇ ಪ್ರತಿವಾದಿಯ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸುವ ಮುನ್ನ ಸದರಿ ಖರೀದಿ ಪತ್ರದ ಬಗ್ಗೆ ನನಗೆ ಗೊತ್ತಿರಲಿಲ್ಲ. ಆದರೂ ಸಹ ಸದರಿ ಜಮೀನಿನ ಖರೀದಿದಾರರನ್ನು ಯಾವ ಕಾರಣಕ್ಕಾಗಿ 08 ನೇ ಪ್ರತಿವಾದಿಯನ್ನಾಗಿ ಮಾಡಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಎಮ್.ಆರ್.ಸಂಖ್ಯೆ: ಹೆಚ್35/2014-15 ನೇದ್ದನ್ನು ನಾವು ಎಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಖರೀದಿ ಪತ್ರವನ್ನು ಸಹ ನಾವು ಪ್ರಶ್ನಿಸಿಲ್ಲ ಎಂದರೆ ಸರಿ.

6. ನಿಪಿ-18 ರಲ್ಲಿ ನಮೂದಿಸಿದ ಸರ್ವೆ ನಂಬರ 20/9 ಕ್ಷೇತ್ರ 02 ಎಕರೆ 24 ಗುಂಟೆಯನ್ನು ಈ ದಾವೆಯಲ್ಲಿ ಸೇರಿಸಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕ 01-07-1970 ಎಂದರೆ ಸರಿ. ನನ್ನ ಅಕ್ಕ 2 ನೇ ವಾದಿಯ ಜನ್ಮ ದಿನಾಂಕಃ 18-05-

1954 ಎಂದರೆ ಸರಿ. ವಾದ ಪತ್ರದಲ್ಲಿ ನಮ್ಮ ವಯಸ್ಸನ್ನು ಉದ್ದೇಶಪೂರ್ವಕವಾಗಿ ಸುಳ್ಳು ಬರೆಯಿಸಲಾಗಿದೆ ಎಂದರೆ ಸರಿಅಲ್ಲ.

7. ದಾವಾ ಸ್ವತ್ತುಗಳ ಚೆಕ್ಕಬಂದಿ ನನಗೆ ಗೊತ್ತಿಲ್ಲ. ನಾನು ಖಾಯಂ ತರೀಕ ವಾಯ್ ಟಿ ಹೊನ್ನತ್ತಿಯಲ್ಲಿ ವಾಸವಾಗಿರುತ್ತೇನೆ. ದಾವಾ ಸರ್ವೆ ನಂಬರ 17/2 ನ್ನು ಬಿಟ್ಟು ಉಳಿದ ದಾವಾ ಜಮೀನು ಹಾಗೂ ಪಂಚಾಯ್ತಿ ಆಸ್ತಿಗಳ ಕಬ್ಜಾ ವಹಿವಾಟಿಯಲ್ಲಿ 1 ರಿಂದ 3 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಾದಿಯರಾದ ನಮಗಾಗಲೀ ಹಾಗೂ 4 ರಿಂದ 6 ನೇ ಪ್ರತಿವಾದಿಯರಿಗಾಗಲೀ ಯಾವುದೇ ಹಕ್ಕು ವ ಹಿಸ್ಸೆ ಇಲ್ಲ ಎಂದರೆ ಸರಿಅಲ್ಲ. 4 ನೇ ಪ್ರತಿವಾದಿ ಖಾಯಂ ಆಗಿ ಕೊಟೀಹಾಳ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅದೇ ರೀತಿ 5 ನೇ ಪ್ರತಿವಾದಿ ಖಾಯಂ ಆಗಿ ಶಾಡಗುಪ್ಪಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿ ಖಾಯಂ ಆಗಿ ನದಿಹರಳಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 8 ನೇ ಪ್ರತಿವಾದಿ ಖರೀದಿಸಿದ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದೀರಾ ಎಂದರೆ ಸಾಕ್ಷಿ ಸದರಿ ಖರೀದಿಗೆ ನಾವು ಸಹಿ ಮಾಡಿಲ್ಲ. ಸದರಿ ಆಸ್ತಿಯಲ್ಲಿ ಪಾಲು ಬೇಡ ತಗೊಳ್ಳಿ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಓದಲು ಬರುವುದಿಲ್ಲ ಅದಕ್ಕೆ ಮಾಹಿತಿ ಇಲ್ಲ ಎನ್ನುತ್ತಾರೆ. ವಾದ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಅಲ್ಲ. 8 ನೇ ಪ್ರತಿವಾದಿ ಸರ್ವೆ ನಂಬರ 17/2 ಜಮೀನನ್ನು ರೂ. 3,70,000/- ಪ್ರತಿಫಲ ನೀಡಿ ಖರೀದಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

8. ಬನ್ನಿಹಟ್ಟಿ ಗ್ರಾಮದ ಸರ್ವೆ ನಂಬರ 20/4 ಮತ್ತು 20/9 ರ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸದೆ ಇರುವುದರಿಂದ ಈ ದಾವೆ ವಜಾಗೊಳ್ಳಲು ಅರ್ಹವಾಗಿರುತ್ತದೆ ಎಂದರೆ ಸರಿಅಲ್ಲ. ಸದರಿ ಜಮೀನುಗಳನ್ನು ಖರೀದಿಸಿದ ಬಸವರಾಜ ಮರಡೆಪ್ಪ ಪೂಜಾರ, ಮಲ್ಲಿಕಾರ್ಜುನ ಬಸವರಾಜ ಪೂಜಾರ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ಈ ಈ ದಾವೆ ವಜಾಗೊಳ್ಳಲು

ಅರ್ಹವಾಗಿರುತ್ತದೆ ಎಂದರೆ ಸರಿಅಲ್ಲ. ನಾವು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅವುಗಳ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಸರಿಯಾದ ನ್ಯಾಯಾಲಯದ ಶುಲ್ಕ ಪಾವತಿಸಿಲ್ಲ ಎಂದರೆ ಸರಿಅಲ್ಲ. ಹಾಗೂ ನಾವು ಕೇವಲ ರೂ.200/- ನ್ಯಾಯಾಲಯದ ಶುಲ್ಕ ಪಾವತಿಸಿರುವುದು ಸರಿಅಲ್ಲ ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂಬರ 17/2 ಕ್ಕೆ ಸಂಬಂಧಿಸಿದಂತೆ 8 ನೇ ಪ್ರತಿವಾದಿಯ ಹೆಸರಿನಲ್ಲಿರುವ ಖರೀದಿ ಪತ್ರದ ಮೇಲು ಸಹ ಸರಿಯಾದ ನ್ಯಾಯಾಲಯದ ಶುಲ್ಕ ನಾವು ಪಾವತಿಸಿಲ್ಲ ಎಂದರೆ ಸರಿಅಲ್ಲ.

9.ವಾದಿಯರಾದ ನಾವು ನಮ್ಮ ಉದ್ಯೋಗವನ್ನು ಮನೆಗೆಲಸ ಎಂದು ವಾದ ಪತ್ರದಲ್ಲಿ ಬರೆಸಿರುತ್ತೇವೆ ಎಂದೆರ ಸರಿ. ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಅಲ್ಲ. 8 ನೇ ಪ್ರತಿವಾದಿಯನ್ನು ವಿನಾ ಕಾರಣ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದರಿಂದ ಅವರಿಗೆ ರೂ.50,000/- ಖರ್ಚಿನ ಹಣ ನೀಡಲು ನಾವು ಬಾಧ್ಯಸ್ಥರು ಎಂದರೆ ಸರಿಅಲ್ಲ.

**<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಡಿ ಹೆಚ್ ಬಿ ವಕೀಲರಿಂದಃ</u>**

ಶಾರದಮ್ಮ ಕೋಳೂರ ನನ್ನ ಅಕ್ಕ ಎಂದರೆ ಸಾಕ್ಷಿ ದೊಡ್ಡಪ್ಪನ ಮಗಳು ಎನ್ನುತ್ತಾರೆ. ಸದರಿ ಶಾರದಮ್ಮರವರನ್ನು ಕದರಮಂಡಲಗಿಯ ಶಿವಪ್ಪ ಕೋಳೂರುರವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಶಾರದಮ್ಮರವರು ದಿಃ 16-02-2019 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಸದರಿ ಶಾರದಮ್ಮರವರಿಗೂ ಸಹ ಹಿಸ್ಸೆ ಇದೆ ಎಂದರೆ ಸರಿಅಲ್ಲ. ಸದರಿ ಶಾರದಮ್ಮರವರಿಗೂ ಸಹ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಇದೆ ಎಂದರೆ ಸರಿಅಲ್ಲ. ಸಾಕ್ಷಿ ಮುಂದುವರೆದು ಅವರ ಆಸ್ತಿ ಬೇರೆ ನಮ್ಮ ಆಸ್ತಿ ಬೇರೆ ಎನ್ನುತ್ತಾರೆ. ಸದರಿ ಮೃತ ಶಾರದಮ್ಮರವರಿಗೆ 09 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಸದರಿಯವರಿಂದರೆ 1. ಶಶಿಕಲಾ 2. ರೇಣುಕಾ 3. ಸಾವಿತ್ರವ್ವ 4. ರತ್ನವ್ವ 5. ಪ್ರೇಮಾ 6. ಗೌರಮ್ಮ 7. ಬಸಮ್ಮ 8. ಶೇಖಮ್ಮ 9.ಗೀತಾ ಎಂದರೆ ಸರಿ. ಸದರಿ 1 ನೇ ಶಶಿಕಲಾರವರೇ ಈ ದಾವೆಯ 1 ನೇ ಪ್ರತಿವಾದಿ ಎಂದರೆ ಸರಿ. ಅದೇ ರೀತಿ ಮೇಲೇ ಹೇಳಿದ ರೇಣುಕಾರವರು 7 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ.

ಸದರಿ ಶಾರದಮ್ಮರವರ 9 ಜನ ಹೆಣ್ಣು ಮಕ್ಕಳಿಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಇದ್ದರೂ ಸಹ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಅಲ್ಲ. ಸದರಿ ಶಾರದಮ್ಮ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಗೆ ಸಂಬಂಧಿಸಿದ ಆಸ್ತಿಯಲ್ಲಿ ಪಾಲು ಕೇಳಿದ್ದರಿಂದ ಅವರನ್ನು ಸೇರಿಸಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳ ಪೈಕಿ ಕೆಲವು ಆಸ್ತಿಗಳು 7 ನೇ ಪ್ರತಿವಾದಿ ಹಾಗೂ 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಜಂಟಿಯಾಗಿವೆ ಎಂದರೆ ನನಗೆ ಗೊತ್ತಿಲ್ಲ.

2.ಬನ್ನಿಹಟ್ಟಿ ಗ್ರಾಮದಲ್ಲಿ ಬುಡ್ಡನಗೌಡ್ರು ಮತ್ತು ಪಾಟೀಲ ಮನೆತನವದರು ಅಣ್ಣತಮ್ಮಂದಿರು ಎಂದರೆ ಸರಿ. ಸದರಿ ಮೂಲ ಪುರುಷ ರಾಮನಗೌಡ ಪಾಟೀಲಕಿ ಮಾಡುತ್ತಿದ್ದರಿಂದ ಆತನ ಅಡ್ಡಹೆಸರು ಬುಡ್ಡನಗೌಡ್ರು ಬದಲಾಗಿ ಪಾಟೀಲ ಎಂದು ಆಯಿತು ಎಂದರೆ ಸರಿ. ಸದರಿ ಪಾಟೀಲ ಹಾಗೂ ಬುಡ್ಡನಗೌಡ್ರು ಮನೆತನದಲ್ಲಿ ಜಂಟಿಯಾಗಿ ಅಡವಿ ಹೊಲ ಇದೆ ಎಂದರೆ ಸರಿ. ಸದರಿ ಜಮೀನನ್ನು ಸದರಿಯವರ ದನ ಕರುಗಳನ್ನು ಮೇಯಿಸಲು ಬಿಟ್ಟಿದ್ದರು ಎಂದರೆ ಸರಿ. ಸದರಿ ಜಮೀನಿನ ಸ.ನಂಬರ 18/6 ಕ್ಷೇತ್ರ 04 ಎಕರೆ 13 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಎಲ್ಲರ ಹೆಸರು ಸದರಿ ಜಮೀನಿನ ಆರ್ ಟಿ ಸಿ ಯಲ್ಲಿ ಇವೆ ಎನ್ನುತ್ತಾರೆ. ಸದರಿ ಜಮೀನಿನ ಉತಾರದಲ್ಲಿ ಬುಡನಗೌಡ್ರು ಹಾಗೂ ಪಾಟೀಲ ಕುಟುಂಬದ ಸದಸ್ಯರ ಹೆಸರು ಇವೆ ಎಂದರೆ ಸರಿ. ಸದರಿ ಉತಾರದಲ್ಲಿ ನನ್ನ ತಂದೆಯ ಹೆಸರು ಸಹ ಇದೆ ಎಂದರೆ ಸರಿ. ಸದರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಮ್ಮ ಅಜ್ಜನ ಕಾಲದಿಂದಲೂ ಸದರಿ ಜಮೀನಿನ ಉತಾರದಲ್ಲಿ ಸಾಕಷ್ಟು ಜನರ ಹೆಸರು ಇದ್ದದ್ದರಿಂದ ಅದನ್ನು ಸೇರಿಸಿಲ್ಲ ಎನ್ನುತ್ತಾರೆ. ಸದರಿ ಜಮೀನಿನಲ್ಲಿ ನಮಗೂ ಸಹ ಹಕ್ಕು ಇದೆ.

3. ಬನ್ನಿಹಟ್ಟಿ ಗ್ರಾಮದ ಸ.ನಂಬರ 18/3 ಜಮೀನು ನನ್ನ ತಂದೆ ರಾಮನಗೌಡ ಹಾಗೂ ಆತನ ಸಹೋದರ ಕಲ್ಲನಗೌಡರವರ ಹೆಸರಿಗೆ ಜಂಟಿಯಾಗಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಉತಾರದಲ್ಲಿ ನನ್ನ ತಂದೆಯ ಹೆಸರು ಇದ್ದರೂ ಸಹ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಮದುವೆ 2003 ರಲ್ಲಿ ಆಗಿದೆ

ಎಂದರೆ ಸರಿ. ನನ್ನ ಮದುವೆಯ ಖರ್ಚಿಗಾಗಿ 2003 ರಲ್ಲಿ ಸ. ನಂಬರ 18/8 ನ್ನು ಉಳುವೆಪ್ಪಗೌಡ ಬುಡ್ಡನಗೌಡ್ರರವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿಅಲ್ಲ. ಸದರಿ ಜಮೀನನ್ನು 2003 ರಲ್ಲಿ ನನ್ನ ಮದುವೆ ಖರ್ಚಿಗಾಗಿ ಮಾರಾಟ ಮಾಡಿದ್ದರೂ ಸಹ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಅಲ್ಲ. ಸದರಿ ಜಮೀನನ್ನು ಖರೀದಿಸಿದ ಕ್ರಯದಾರರಾದ ಉಳುವೆಪ್ಪಗೌಡ ಬುಡ್ಡನಗೌಡ್ರರವರನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಉಳುವೆಪ್ಪಗೌಡ ಬುಡ್ಡನಗೌಡ್ರು ಸದರಿ ಜಮೀನನ್ನು ವೀರನಗೌಡರವರಿಗೆ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಮಾರಾಟ ಮಾಡಿದ್ದು ಗೊತ್ತಿದ್ದರಿಂದ ಸೇರಿಸಿಲ್ಲ ಎನ್ನುತ್ತಾರೆ.

4. ಅದೇ ರೀತಿ ಸ.ನಂಬರ 20/4 ಕ್ಷೇತ್ರ 1 ಎಕರೆ ಹಾಗೂ ಸ. ನಂಬರ 20/9 ಕ್ಷೇತ್ರ 24 ಗುಂಟೆ ನೇದ್ದನ್ನು 1 ರಿಂದ 3 ನೇ ಪ್ರತಿವಾದಿಯರು ಬಸವರಾಜ ಪೂಜಾರ ಹಾಗೂ ಮಲ್ಲಿಕಾರ್ಜುನ ಪೂಜಾರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಹಾಗೂ ಖರೀದಿಸಿದ ಜನರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಬಸವರಾಜ ಪೂಜಾರ ಹಾಗೂ ಮಲ್ಲಿಕಾರ್ಜುನ ಪೂಜಾರ 6 ನೇ ಪ್ರತಿವಾದಿಗೆ ಸಂಬಂಧಿಕರು ಎಂದರೆ ಸರಿ. ಸದರಿಯವರು 6 ನೇ ಪ್ರತಿವಾದಿಯರ ಸಂಬಂಧಿಕವಾಗಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.